ಓ ಎಸ್ ನಂ. 170/2020
ಡಿ ಡಬ್ಲ್ಯು 1
ದಿನಾಂಕ 08/04/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರಃ ಶ್ರೀ ಎಸ್ ಎನ್ ಎ ವಕೀಲರಿಂದಃ

ನಿಡಿ-1 ರ ಕ್ರಯಪತ್ರದಲ್ಲಿ ಸದರಿ ಸ್ವತ್ತನ್ನು ಸ್ತ್ರೀಧನದ ರೂಪದಲ್ಲಿ ನನ್ನ ತಾಯಿಗೆ ಕೊಡಿಸಿರುವ ಬಗ್ಗೆ ಎಲ್ಲಿಯೂ ಸಹ ಒಕ್ಕಣಿಕೆ ಇಲ್ಲ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ಸದರಿ ಒಕ್ಕಣಿಕೆಯನ್ನು ತೋರಿಸಲು ಆಗುತ್ತದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಪ್ರಸ್ತುತ ದಾವೆಯಲ್ಲಿ ವಾದಿ ಹಾಜರುಪಡಿಸಿರುವ ಪಹಣಿಗಳ ಬಗ್ಗೆ ನನಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-2 ರಿಂದ 7 ರ ಪಹಣಿಗಳಲ್ಲಿ ಕಮಲಮ್ಮ, ಮಂಜುನಾಥ, ಸುರೇಶ್, ರಮೇಶ್ ಮತ್ತು ಸೋಮಶೇಖರ್ ಆದ ನಮ್ಮಗಳ ಹೆಸರಿನಲ್ಲಿ ಜಂಟಿಯಾಗಿ ಬರುತ್ತಿದೆ ಎಂದರೆ ಸಾಕ್ಷಿ ಅದನ್ನು ಮೋಸದಿಂದ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಮೋಸದಿಂದ ಜಂಟಿ ಖಾತೆಳನ್ನು ಮಾಡಿಸಿರುವ ಬಾಬ್ತು ನಾನು ಯಾವುದಾದರೂ ದೂರನ್ನು ನೀಡಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನಿಪಿ-2 ರಿಂದ 7 ರಂತೆ ಖಾತೆ ಬದಲಾವಣೆ ಆಗಿರುವ ಆದೇಶವನ್ನು ನಾನು

ಎಲ್ಲಿಯಾದರೂ ಪ್ರಶ್ನಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನಿಪಿ-7 ರ ಪಹಣಿಯ ಕಲಂ ನಂ.11 ರಲ್ಲಿ ಬ್ಯಾಂಕಿನಿಂದ ಸಾಲ ಪಡೆದ ಬಗ್ಗೆ ನಮೂದು ಇದೆ ಎಂದರೆ ಸಾಕ್ಷಿ ಹೌದು ನಾನು ಸಾಲ ಪಡೆದಿಲ್ಲ ಎಂದು ನುಡಿಯುತ್ತಾರೆ. ನಿಪಿ-7 ರ ಪಹಣಿಯ 9 ನೇ ಕಲಂನಲ್ಲಿ ನನ್ನ ಮತ್ತು ನನ್ನ ಸಹೋದರರ ಹೆಸರು ಸಹ ನಮೂದಿದೆ ಎಂದರೆ ಸರಿ. ನನ್ನ ತಾಯಿಗೆ ಅವರ ತವರು ಮನೆಯಿಂದ ದಾವಾ ಐಟಂ ನಂ.3 ರ ಆಸ್ತಿಯನ್ನು ಖರೀದಿಸಲು ಆದಾಯ ಇತ್ತು ಎಂದು ತೋರಿಸುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನ್ನ ತಾಯಿಗೆ ಅವರ ತವರು ಮನೆ ಕಡೆಯಿಂದ ಆದಾಯ ಇತ್ತು ಆದರೆ ದಾಖಲೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.3 ರ ಆಸ್ತಿಯನ್ನು ನನ್ನ ತಂದೆ ರಂಗಪ್ಪರವರು ದಾವಾ ಐಟಂ ನಂ.1, 2, 4 ಮತ್ತು ಇತರೇ ದಾವಾ ಆಸ್ತಿಗಳಿಂದ ಬಂದ ಆದಾಯದಿಂದ ನನ್ನ ತಾಯಿ ಹೆಸರಿಗೆ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ದಾವಾ ಆಸ್ತಿಗಳಲ್ಲಿ ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂಬ ಕಾರಣದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳೂ ಒಟ್ಟು ಕುಟುಂಬದ ಆಸ್ತಿಗಳಾಗಿರುವುದರಿಂದ ಅದರಲ್ಲಿ ವಾದಿ ಮತ್ತು ಇತರ ಪ್ರತಿವಾದಿಗಳಿಗೂ ಸಹ ಹಿಸ್ಸೆ ಮತ್ತು ಹಕ್ಕು ಇದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.